

ರಘುನಾಥಾಚಾರಿ ಅವರು ಇನ್ನೂ ಹಲವಾರು ಜ್ಯೋತಿಷಿಗಳ ತಪ್ಪು ಲೆಕ್ಕಗಳನ್ನು ಉಲ್ಲೇಖಿಸಿದ್ದಾರೆ. ಲೇವಡಿ ಮಾಡಿರುವುದನ್ನು ಗಮನಿಸಿ. ಗಂಜಾಂ ಜಿಲ್ಲೆಯ ಜ್ಯೋತಿಷಿಯೊಬ್ಬರು ಮತ್ತು ತಂಜಾವೂರಿನವರೊಬ್ಬರು 'ಪ್ರಜೋತ್ಪತ್ತಿ ಸಂವತ್ಸರ (1878) ಜ್ಯೇಷ್ಠ ಬಹುಳ 30 ಗ್ರಹಣ ಸಂಭವಿಸುವುದೆಂದು ಬರದಿದ್ದಾರೆ. ಆ ದಿನ ಭರತಖಂಡದೊಳಗೆ ಗ್ರಹಣವುಂಟಾಗಲೇ ಯಿಲ್ಲ. ಹಾಗಿರುವಲ್ಲಿ ವಂದು ವೇಳೆ ಮೇಘದಿಂದ ಆ ದಿನ ಸೂರ್ಯ ತಿಳಿಯದ ಹಾಗೆ ಯಿದ್ದರೂ ಆ ಯರಡು ಪಂಚಾಂಗವನ್ನು ಅನುಸರಿಸುವವರು ಆ ಕಾಲದಲ್ಲಿ ತರ್ಪಣಗಳು ಮೊದಲಾದ ಕರ್ಮಗಳನ್ನು ಮಾಡಿದ್ದಕ್ಕೆ ಯೇನು ಫಲಗಳನ್ನು ಅನುಭವಿಸುವರೋ ತಿಳಿಯಲಿಲ್ಲಾ... ಸ್ಪರ್ಶ ಮೋಕ್ಷಾದಿ ದಿಕ್ಕುಗಳನ್ನೂ ತಲೆಕೆಳಗಾಗಿ ಹೇಳಿರುವುದೂ... ಮಿಗಿಲಾಶ್ಚರ್ಯ.'

1879ರ ಈ ಸೂರ್ಯಗ್ರಹಣದ ಬಗ್ಗೆ ರಘುನಾಥಾಚಾರಿ ಅವರು ಉಲ್ಲೇಖಿಸಿ ಬಹುಧಾನ್ಯ ಸಂವತ್ಸರದಲ್ಲಿ ಗ್ರಹಣ ಗೋಚರಿಸುವುದನ್ನು ಕೂಡ ಕುಹಕವಾಡಿದ್ದಾರೆ. 'ಅವರು ಬರೆಯುವ ಕಾಲಕ್ಕೆ ಹತ್ತು ಸಂವತ್ಸರದ ಮೇಲೆ ಬಹುಧಾನ್ಯದಲ್ಲಿ ಸೂರ್ಯಗ್ರಹಣವುಂಟಾಗುವ ಹಾಗೆ ಬರದವರು ಸಂವತ್ಸರದೊಳಗೆ ಸಂಭವಿಸುವ ಯೀ ಪ್ರಜೋತ್ಪತ್ತಿ ಸಂವತ್ಸರದ ವಿಶೇಷವೂನೂ, ಅಂಗೀರಸದಲ್ಲಿ ಸಂಭವಿಸುವ ಮತ್ತೊಂದು ವಿಶೇಷ ಸೂರ್ಯಗ್ರಹಣವೂನು ಯಾಕೆ ತಿಳಿದು ಬರೆಯದೇ ಹೋದರೋ ತಿಳಿಯದು. ಅದರಿಂದ ಯೀ ಸಿದ್ಧಾಂತಿಗಳಿಗೆ ಜ್ಯೋತಿಷ್ಯ ಗಣಿತ ಸಿದ್ಧಾಂತದೊಳಗೆ ಉಂಟಾಗಿರುವ ಪಾಂಡಿತ್ಯಬಲವನ್ನು ಬುದ್ಧಿವಂತರೇ ತಿಳಿದುಕೊಳ್ಳಬಹುದು. ಬಹುಧಾನ್ಯದ ವಂದು ಗ್ರಹಣವುಂಟಾಗುವ ಅದನ್ನು ಕುರಿತು ಆ ಕಾಲದಲ್ಲಿ ವಿವರಿಸಲ್ಪಡುವುದು.'

ಒಟ್ಟಿನಲ್ಲಿ ಈ ಕುರಿತು ಒಂದು ವಾಗ್ವಾದವಂತೂ ನಡೆದಿರಲೇಬೇಕು. ಸ್ಥಳೀಯ ಸಿದ್ಧಾಂತಿಗಳ ಕುರಿತು ಭಿನ್ನಾಭಿಪ್ರಾಯಕ್ಕೂ ಕಾರಣವಾಗಿರಬೇಕು. ಜಗಳದಲ್ಲಿ ಲಾಭ ಪಡೆದುಕೊಂಡ ಬ್ರಿಟಿಷರಿಗೆ ತಮ್ಮ ಹೊಸ ವಿಧಾನಗಳು ಬೇರೂರಿಸುವುದಕ್ಕೆ ಒಂದು ದೊಡ್ಡ ಅನುಕೂಲವಾಗಿರಬೇಕು.

ಪಂಚಾಂಗದಲ್ಲಿ ತಿದ್ದುಪಡಿ ಮಾಡಿಕೊಳ್ಳಲೇಬೇಕಾದ ಅನಿವಾರ್ಯತೆಯನ್ನು ಕಂಡುಕೊಂಡ ಹಲವಾರು ಜ್ಯೋತಿಷಿಗಳ ಹೆಸರುಗಳು ರಘುನಾಥಾಚಾರಿ ಅವರ ಪುಸ್ತಕದಲ್ಲಿದೆ. ನುಂಗಂಬಾಕಂನ ವೆಂಕಟಸುಬ್ರಹ್ಮಣ್ಯ ಸಿದ್ಧಾಂತಿಗಳು, ಕಡಕಮಳ್ಳ ವೆಂಕಟ ಕೃಷ್ಣರಾಯರು, ತಿದ್ದುಪಡಿಗಳನ್ನು ಅಳವಡಿಸುವ ವಾಕ್ಯಗಳನ್ನು ರಚಿಸುವಲ್ಲಿ ಸಹಾಯ ಮಾಡುತ್ತಿದ್ದರು. (ಪ್ರತಿ ವರ್ಷದ ತಿದ್ದುಪಡಿಗಳನ್ನು ಶ್ಲೋಕಗಳನ್ನಾಗಿ ರಚಿಸಿ ಬಾಯಿಪಾಠ ಮಾಡುವ ಪದ್ಧತಿ ಇತ್ತು. ಬಹುಶಃ ಯುಗಾದಿಯಂದು ಈ ಪಠಣ ಮತ್ತು ಮನನ ನಡೆಯುತ್ತಿತ್ತು.) 'ದೃಕ್ಸಿದ್ಧ' ಪಂಚಾಂಗಗಳನ್ನು ಸಿದ್ಧಪಡಿಸುತ್ತಿದ್ದವರೆಂದರೆ ಕಾಳಹಸ್ತಿಯ ರಾಘವಾಚಾರ್ಯ, ಪರವಸ್ತೂರು ಅನಂತಾಚಾರ್ಯರು, ಪೀಠಾಪುರದ ವಾರಾಣಸೀ ಭೈರವ ಸಿದ್ಧಾಂತಿಗಳು, ಕಾಂಚೀಪುರದ ಶ್ರೀಕೃಷ್ಣತಾತಾಚಾರ್ಯರು, ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನ ಯಾಚಂಬಾಡಿ ಶ್ರೀನಿವಾಸ ರಾಘವಾಚಾರ್ಯರು, ತಿರುವಲ್ಲಿಯ ನಾದೂರು ಗೋವಿಂದಾಚಾರ್ಯರು, ಸಿವಿಲ್ ಕೋರ್ಟ್ ವಕೀಲ ನಡಾದೂರು ಭಾಷ್ಯಕಾರಾಚಾರ್ಯರು, ಚಿತ್ತೂರು ಸದಾನಂದ ಶಾಸ್ತ್ರಿಗಳು, ಯಾಚಂಬಾಡಿ ಶ್ರೀನಿವಾಸ ವರದಾಚಾರ್ಯರು... ಹೀಗೆ.

ರಘುನಾಥಾಚಾರಿ ಅವರಿಗೆ ಪಂಡಿತರನ್ನು ಮನವೊಲಿಸುವ ಕೆಲಸ ಸುಲಭದ್ದಾಗಿರಲಿಲ್ಲ. ಅವರ ಮಾತುಗಳಲ್ಲೇ ಹೇಳುವುದಾದರೆ '... ಯುಕ್ತಾಯುಕ್ತಗಳನ್ನು ಗ್ರಹಿಸಿ ಒಪ್ಪಿಕೊಳುವ ಕೆಲವು ವಿವೇಕಿಗಳ ಹೊರ್ತು ಇತರರು ಅವುಗಳನ್ನು ಕೇಳುವುದಕ್ಕೇ ಮುಂಚೆಯೇ ವಪ್ಪಿಕೊಳ್ಳದೆ ನೀನಿದುವರೆಗೆ ಹೇಳಿದ್ದು ಸಾಕು. ಅಯ್ಯೋ ಯಿದು ಏನನ್ಯಾಯ... ಗ್ರಹಣಗಳಿಗೆ ರಾಹು ಕೇತುಗಳೆಂಬ ರಾಕ್ಷಸರು ನಿಮಿತ್ತವಾಗಿರೋ ಹಾಗಿರಲು, ಇಂಗ್ಲಿಶ್‌ನವರ ಸಂಗಡ ಶೇರಿಕೊಂಡು ಪುರಾಣ ವಿರುದ್ಧವಾದ ವಿಷಯಗಳನ್ನು ಹೇಳುತ್ತಿದ್ದೀಯಲ್ಲಾ. ಅಯ್ಯೋ ಇನ್ನು ಕೆಲವು ದಿವಸಗಳೊಳಗೆ ಇಂಗ್ಲೀಷು ಮತದೊಳಗೆ ಮುಳುಗಿ ಜಾತಿಭ್ರಷ್ಟನಾಗಿ ಆಗತಕ್ಕವ ಯಂದು ಬಂಧು ಕೋಟಿವಳಗೆ ಶೇರಿದವರು ಪರಿತಪಿಸುತ್ತಾರೆ...'

ಒಟ್ಟಿನಲ್ಲಿ ಪಂಡಿತವರ್ಗದಲ್ಲಿ ಒಂದು ಕ್ರಾಂತಿಯೇ ಉಂಟಾಯಿತು ಎನ್ನಬಹುದಲ್ಲವೇ? ಹಾಗೆ ತಿದ್ದುಪಡಿ ಮಾಡಲು ಕಲಿತಿದ್ದ ಪೀಳಿಗೆಯ ನಂತರ ಅದು ಎಷ್ಟರ ಮಟ್ಟಿಗೆ ಮುಂದುವರೆಯಿತೋ ಗೊತ್ತಿಲ್ಲ. ಸರಿಸುಮಾರು ಅದೇ ಸಮಯದಲ್ಲಿ ವೆಂಕಟೇಶ ಬಾಪೂಜಿ ಕೇತ್ಕರ್ ಅವರು ಬಾಗಲಕೋಟೆಯಿಂದ ಪರಿಷ್ಕೃತ ಪಟ್ಟಿಗಳನ್ನು ಒದಗಿಸಿದರು. ಕೇತಕೀ ಪಂಚಾಂಗ ಎಂಬ ಹೆಸರಿನಿಂದ ಇದು ಉತ್ತರ ಕರ್ನಾಟಕದಲ್ಲಿ ಜನಪ್ರಿಯವಾಗಿತ್ತು.

ಇಷ್ಟೆಲ್ಲಾ ಆದರೂ ಈಗ್ಗೆ ಮೂವತ್ತು ವರ್ಷಗಳ ಹಿಂದಿನವರೆಗೂ ಹಬ್ಬ ಹುಣ್ಣಿಮೆಗಳಿಗೆ ತಮ್ಮ ತಮ್ಮ ಮಠಗಳಿಗನುಸಾರವಾದ ಲೆಕ್ಕಗಳನ್ನು ಮಾಡಿಕೊಂಡು, ಗೊಂದಲ ಉಂಟು ಮಾಡುತ್ತಿದ್ದುದು ಸರ್ವೇ ಸಾಧಾರಣ ಆಗಿತ್ತು. ಆದರೆ ಗ್ರಹಣಗಳಿಗೆ ಮಾತ್ರ ಭಾರತ ಸರ್ಕಾರದ ರಾಷ್ಟ್ರೀಯ ಪಂಚಾಂಗವೇ ಬೇಕಾಗಿತ್ತು. ಮೇಘನಾದ ಸಹಾ ಅವರು ಸ್ಥಾಪಿಸಿದ ಈ ಸಂಸ್ಥೆ ಭಾರತದ ನಾಲ್ಕು ಮುಖ್ಯ ನಗರಗಳಿಗೆ ಸೂರ್ಯೋದಯ ಸೂರ್ಯಾಸ್ತಗಳ ಸಮಯದಿಂದ ಹಿಡಿದು ಎಲ್ಲ ವಿವರಗಳನ್ನೂ ಎಲ್ಲ ಭಾರತೀಯ ಭಾಷೆಗಳಲ್ಲಿ ಒದಗಿಸುತ್ತಿದೆ. ಗ್ರಹಣಗಳ ವಿವರಗಳನ್ನು ಎಲ್ಲ ತಾಲ್ಲೂಕು ಕೇಂದ್ರಗಳಿಗೂ ಪಟ್ಟಿ ಮಾಡುತ್ತದೆ.

ಆದರೂ... ರಾಷ್ಟ್ರೀಯ ಪಂಚಾಂಗವನ್ನು ಬಳಸುತ್ತಿರುವ ಏಕಮಾತ್ರ ಸಂಸ್ಥೆಯೆಂದರೆ ಆಕಾಶವಾಣಿ ಮಾತ್ರ!

ಪ್ರತಿಕ್ರಿಯಿಸಿ: **feedback@sudha.co.in**